# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 193 | Pages. 2 | Date: 11-07-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 193 – ಪುಟಗಳು : 2 11-07-2026 ಶನಿವಾರ | Ph: 8762954248 | ದರ : ₹1


## ತಡೆಗೋಡೆ ಮರು ನಿರ್ಮಾಣಕ್ಕೆ ಡಿಪಿಆರ್ ರಚಿಸಿ

### ಅಧಿಕಾರಿಗಳಿಗೆ ಶಾಸಕ ಸಿಮೆಂಟ್ ಮಂಜು ಸೂಚನೆ | ಮಳೆ ಹಾನಿ ತಡೆಗೆ ಕಿವಿಮಾತು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಷ್ಟ್ರೀಯ ಹೆದ್ದಾರಿ-75ರ ಅಪಾಯಕಾರಿ ತಡೆಗೋಡೆಗಳ ಮರುನಿರ್ಮಾಣಕ್ಕೆ ನೀಲನಕ್ಷೆ ಸಿದ್ಧಪಡಿಸಬೇಕು. ದುಸ್ಥಿತಿಯಲ್ಲಿರುವ ಪಟ್ಟಣದ ಹೇಮಾವತಿ ಸೇತುವೆಯ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಳೆ ಹಾನಿ ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ವಿವಿಧ ಇಲಾಖೆ ಅಧಿಕಾರಿಗಳ ತುರ್ತು ಸಭೆಯಲ್ಲಿ ಮಾತನಾಡಿ, ತಾಲ್ಲೂಕಿನಲ್ಲಿ ಸುರಿದ ಭಾರೀ ಮಳೆಯಿಂದ ಉಂಟಾಗಿರುವ ಹಾನಿಯನ್ನು ಸರಿಪಡಿಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದರು.

ಈ ಬಾರಿ ಕಳೆದ ವರ್ಷಗಳಿಗೆ ಹೋಲಿಸಿದರೆ ಮಳೆಯ ಪ್ರಮಾಣ ಕಡಿಮೆಯಿದ್ದರೂ, ಹಲವೆಡೆ ತಡೆಗೋಡೆಗಳು ಕುಸಿದಿವೆ, ರಸ್ತೆ ಹದಗೆಟ್ಟಿವೆ ಹಾಗೂ ಹಲವು ಸರ್ಕಾರಿ ಶಾಲೆಗಳಿಗೂ ಹಾನಿಯಾಗಿದೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಗಳು ಮತ್ತು ತುರ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶದಿಂದ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಹೇಳಿದರು.

ಕಳೆದ ಮೂರು ವರ್ಷಗಳಿಂದ ತಾಲ್ಲೂಕಿಗೆ ಸರ್ಕಾರದಿಂದ ಯಾವುದೇ ಮನೆಗಳು ಮಂಜೂರಾಗಿಲ್ಲ. ಬಡವರ ಹಿತದೃಷ್ಟಿಯಿಂದ ಸರ್ಕಾರವು ಕನಿಷ್ಟ ಪ್ರತಿ ತಾಲ್ಲೂಕಿಗೆ 5,000 ಮನೆ ಮಂಜೂರು ಮಾಡಬೇಕು. ಮನೆ ಹಂಚಿಕೆ ವಿಚಾರದಲ್ಲಿ ತಾರತಮ್ಯ ಆಗಬಾರದು ಎಂದರು.



ಮಲೆನಾಡು ಭಾಗದ ವಿಶೇಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕ ಪರಿಹಾರ ಪ್ಯಾಕೇಜ್ ಘೋಷಿಸಬೇಕು. ಬಡವರ ಅನುಕೂಲಕ್ಕಾಗಿ ವಿಶೇಷ ನಿಯಮಾವಳಿ ರೂಪಿಸಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ಹೇಮಾವತಿ ಸೇತುವೆ ಶಿಥಿಲಾವಸ್ಥೆಗೆ ತಲುಪುತ್ತಿರುವ ಹಿನ್ನೆಲೆಯಲ್ಲಿ ದುರಸ್ತಿ ಹಾಗೂ ಹೊಸ ಸೇತುವೆ ನಿರ್ಮಾಣಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ಮಲೆನಾಡು ಭಾಗದಲ್ಲಿ ರಸ್ತೆಗಳನ್ನು ದೀರ್ಘಕಾಲ ಬಾಳಿಕೆ ಬರುವಂತೆ ಮಾಡಲು ರಸ್ತೆ ನಿರ್ಮಾಣದ ಜೊತೆಗೆ ಬದಿಯ ಚರಂಡಿ (ಸೈಡ್ ಡ್ರೈನ್) ನಿರ್ಮಾಣಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು. ರಸ್ತೆಗೆ ಬೀಳುವ ನೀರು ಸರಾಗವಾಗಿ ಚರಂಡಿಗೆ ಹರಿದು ಹೋಗುವ ವ್ಯವಸ್ಥೆ ಅತ್ಯಗತ್ಯ. ಬದಿಯ ಚರಂಡಿ ಇಲ್ಲದೆ ನಿರ್ಮಿಸಿರುವ ಹೊಸ ರಸ್ತೆಗಳು ಒಂದೇ ವರ್ಷದೊಳಗೆ ಹಾಳಾಗಿ ಗುಂಡಿಗಳು ನಿರ್ಮಾಣವಾಗುತ್ತಿವೆ. ಆದ್ದರಿಂದ ಇತರ ಕಾಮಗಾರಿಗಳಿಗಿಂತ ಮೊದಲು ವೈಜ್ಞಾನಿಕ ಚರಂಡಿ ನಿರ್ಮಾಣಕ್ಕೆ ಗಮನ ಹರಿಸಬೇಕೆಂದು ಸಲಹೆ ನೀಡಿದರು.

> ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂಪೂರ್ಣ ಮನೆ ಹಾನಿಯಾದರೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತಿತ್ತು. ಪ್ರಸ್ತುತ ಕೇವಲ 1.20 ಲ.ರೂ. ಮಾತ್ರ ನೀಡಲಾಗುತ್ತಿದೆ. ಅಲ್ಲದೆ ಸರ್ಕಾರಿ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿರುವ ಬಡವರ ಮನೆಗಳು ಹಾನಿಗೊಳಗಾದರೆ ಪರಿಹಾರ ದೊರೆಯುತ್ತಿಲ್ಲ. ಅದರಿಂದ ಸಂಕಷ್ಟದಲ್ಲಿರುವ ಕುಟುಂಬಗಳು ಇನ್ನಷ್ಟು ತೊಂದರೆ ಅನುಭವಿಸುವಂತಾಗಿದೆ.
>
> **– ಸಿಮೆಂಟ್ ಮಂಜು, ಶಾಸಕ**

ಆಲೂರು ತಾಲ್ಲೂಕಿನಲ್ಲಿ 35 ಶಾಲೆಗಳು ದುರಸ್ತಿಗೆ ಒಳಗಾಗಿದ್ದರೆ, ಸಕಲೇಶಪುರ ತಾಲ್ಲೂಕಿನಲ್ಲಿ ನೂರಕ್ಕೂ ಹೆಚ್ಚು ಶಾಲಾ ಕಟ್ಟಡ ಹಾಗು ಶೌಚಾಲಯಗಳು ಹದಗೆಟ್ಟಿವೆ. ಜಿಲ್ಲಾ ಪಂಚಾಯಿತಿ ಇಂಜಿನಿಯರ್‌ಗಳು ಸ್ಥಳ ಪರಿಶೀಲನೆ ನಡೆಸಿ ತಕ್ಷಣ ಡಿಪಿಆರ್ ಸಿದ್ಧಪಡಿಸುವಂತೆ ಸೂಚಿಸಿದರು.

ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಅಬ್ದುಲ್ ರಜಾಕ್, ಎತ್ತಿನಹೊಳೆ ಯೋಜನೆಯ ಅಭಿಯಂತರ ಪ್ರಮೋದ್, ಗ್ರಾಮೀಣಾಭಿವೃದ್ಧಿ ಇಲಾಖೆ ಅಭಿಯಂತರ ಲಖನ್ ಮತ್ತಿತರರಿದ್ದರು.

## ಅರಸೀಕೆರೆಯಲ್ಲಿ ಪತ್ರಿಕಾ ದಿನ: ಸಕಲ ಸಿದ್ಧತೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಹಾಗೂ ಅರಸೀಕೆರೆ ತಾಲ್ಲೂಕು ಪತ್ರಕರ್ತರ ಸಂಘದಿಂದ ಅರಸೀಕೆರೆಯ ಕಸ್ತೂರಬಾ ಗಾಂಧಿ ಸ್ಮಾರಕ ಭವನದಲ್ಲಿ ಜು. 12ರ ಭಾನುವಾರ ಪತ್ರಿಕಾ ದಿನಾಚರಣೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಕೆ.ಎಂ. ಶಿವಲಿಂಗೇಗೌಡ, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ನಿಕಟಪೂರ್ವ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಭಾಗಿಯಾಗಲಿದ್ದಾರೆಂದರು.

ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಪತ್ರಕರ್ತರು, ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಲಿದ್ದು, ಪತ್ರಿಕಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಪೂರ್ಣಗೊಳಿಸಲಾಗಿದೆ. ಟಿ.ಎ.ನಾರಾಯಣಗೌಡ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಮದನಗೌಡರು ಆಶಯ ನುಡಿಗಳನ್ನಾಡಲಿದ್ದು, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಸಂಜೆ 4.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಕೆ.ವಿ.ಪ್ರಭಾಕರ್ ಸಮಾರೋಪ ಭಾಷಣ ಮಾಡಲಿದ್ದು, ಶಿವಾನಂದ ತಗಡೂರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಅರಸೀಕೆರೆ ತಾಲ್ಲೂಕು ಸಂಘದ ಅಧ್ಯಕ್ಷ ಟಿ.ಆನಂದ್ ಅಧ್ಯಕ್ಷತೆ ವಹಿಸಲಿದ್ದಾರೆಂದು ವಿವರಿಸಿದರು.

ಮತ್ತೊಬ್ಬ ಉಪಾಧ್ಯಕ್ಷ ಎನ್.ನಂಜುಂಡೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಖುಶ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ ಇದ್ದರು.

## ಎಸ್‌ಎಂಕೆ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಸ್‌ಎಂಕೆ ನಗರ ಬಡಾವಣೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿದ್ದು, ಎಂಟು ದಿನಗಳಿಂದ ವಿದ್ಯುತ್ ಮತ್ತು ಕುಡಿಯುವ ನೀರಿನ ಸರಬರಾಜು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರು ಸಂಕಷ್ಟದ ಜೀವನ ನಡೆಸುವಂತಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಬಡಾವಣೆಯ ನಿವಾಸಿಗಳು ಬಿಜಿಎಸ್ ವೃತ್ತದಲ್ಲಿ ಶುಕ್ರವಾರ ಸಭೆ ನಡೆಸಿದರು.

ಸ್ಥಳಕ್ಕೆ ಶಾಸಕ ಹೆಚ್.ಪಿ. ಸ್ವರೂಪ್ ಭೇಟಿ ನೀಡಿ ಹಂತ ಹಂತವಾಗಿ ಮೂಲ ಸೌಕರ್ಯ ಕಲ್ಪಿಸುವ ಭರವಸೆ ನೀಡಿದರು.

ಬಡಾವಣೆ ಅಭಿವೃದ್ಧಿ ಸಮಿತಿ ನಿರ್ದೇಶಕ ವೈ.ಬಿ. ರವಿ ಮಾತನಾಡಿ, ಎಸ್‌ಎಂಕೆ ನಗರವನ್ನು ಏಷ್ಯಾದ ಅತಿದೊಡ್ಡ ಬಡಾವಣೆ ಎಂದು ಹೇಳಿಕೊಳ್ಳಲಾಗುತ್ತಿದ್ದರೂ, ಇಲ್ಲಿನ ಜನರು ಕನಿಷ್ಠ ಮೂಲಸೌಕರ್ಯಗಳಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯುತ್ ಇಲ್ಲದೆ ಮನೆಗಳಲ್ಲಿ ಕತ್ತಲು ಆವರಿಸಿದ್ದು, ಕುಡಿಯುವ ನೀರಿನ ಕೊರತೆಯಿಂದ ಕುಟುಂಬಗಳು ತೀವ್ರ ತೊಂದರೆ ಅನುಭವಿಸುತ್ತಿವೆ. ಶಾಲಾ ಮಕ್ಕಳು, ವೃದ್ಧರು, ಮಹಿಳೆಯರು ಸೇರಿದಂತೆ ಎಲ್ಲ ವರ್ಗದ ಜನರು ಸಂಕಷ್ಟದಲ್ಲಿದ್ದಾರೆ. ಹಲವು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ ಎಂದು ಆರೋಪಿಸಿದರು.



ಸಭೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಮಹಿಳೆಯರು, ಪುರುಷರು ಹಾಗೂ ಮಕ್ಕಳು ಭಾಗವಹಿಸಿ ತಮ್ಮ ಅಳಲು ತೋಡಿಕೊಂಡರು. ದಿನನಿತ್ಯದ ಬದುಕು ದುಸ್ತರವಾಗಿದ್ದು, ವಿದ್ಯುತ್ ಇಲ್ಲದ ಕಾರಣ ಕುಡಿಯುವ ನೀರಿನ ಪೂರೈಕೆಯೂ ಸ್ಥಗಿತಗೊಂಡಿದೆ. ರಾತ್ರಿ ವೇಳೆ ಕತ್ತಲಿನಿಂದ ಭದ್ರತೆಯ ಸಮಸ್ಯೆ ಎದುರಾಗಿದ್ದು, ಮಕ್ಕಳು ಮತ್ತು ಮಹಿಳೆಯರು ಭಯದ ವಾತಾವರಣದಲ್ಲಿ ಬದುಕುವಂತಾಗಿದೆ ಎಂದು ನಿವಾಸಿಗಳು ತಿಳಿಸಿದರು.

ನಿವಾಸಿಗಳು ಮಾತನಾಡಿ, ಬಡಾವಣೆಯ ಬಹುತೇಕ ರಸ್ತೆಗಳಲ್ಲಿ ಬೀದಿ ದೀಪಗಳೇ ಇಲ್ಲ. ಎಲ್ಲೆಡೆ ಗಿಡಗಂಟೆಗಳು ಬೆಳೆದಿದ್ದು, ಹಾವು-ಚೇಳುಗಳ ಕಾಟ ಹೆಚ್ಚಾಗಿದೆ. ಕೆಲ ಪ್ರದೇಶಗಳು ಕಾಡಿನಂತಾಗಿದ್ದು, ಸಾರ್ವಜನಿಕರು ಓಡಾಡುವುದಕ್ಕೂ ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ಕಳ್ಳತನ ಸೇರಿದಂತೆ ಅಹಿತಕರ ಘಟನೆಗಳು ನಡೆಯುವ ಭೀತಿ ಕಾಡುತ್ತಿದೆ. ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳು ಬಡಾವಣೆಯ ಸಮಸ್ಯೆಗಳ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಪ್ರತಿಯೊಂದು ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದು ಶೀಘ್ರದಲ್ಲೇ ಪರಿಹಾರ ಕಲ್ಪಿಸಲಾಗುವುದು. ಸೋಮವಾರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಕುಡಿಯುವ ನೀರು, ವಿದ್ಯುತ್, ಬೀದಿ ದೀಪ ಹಾಗೂ ಇತರೆ ಮೂಲಸೌಕರ್ಯಗಳ ಕುರಿತು ಸಮಗ್ರ ಸಭೆ ನಡೆಸಲಾಗುವುದು. ವಿಶೇಷವಾಗಿ ವಿದ್ಯುತ್ ಸಮಸ್ಯೆಯನ್ನು 15 ದಿನಗಳೊಳಗೆ ಸಂಪೂರ್ಣವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಶಾಸಕರ ಭರವಸೆಯ ಬಳಿಕ ನಿವಾಸಿಗಳು ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಮುಂದೂಡಲು ನಿರ್ಧರಿಸಿದರು. ಸೋಮವಾರದ ಅಧಿಕಾರಿಗಳ ಸಭೆ ಮತ್ತು ನಂತರದ ಕ್ರಮಗಳನ್ನು ಗಮನಿಸಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

## ಜಿನ್ನೇನಹಳ್ಳಿ ಶನೇಶ್ವರ ದೇಗುಲ ಮುಜರಾಯಿ ಇಲಾಖೆಗೆ ಸೇರಿಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಜಿನ್ನೇನಹಳ್ಳಿ ಗ್ರಾಮದ ಶನೇಶ್ವರ ದೇಗುಲವನ್ನು ಟ್ರಸ್ಟ್ ಇಲ್ಲವೇ ಮುಜರಾಯಿ ಇಲಾಖೆಗೆ ಸೇರಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಗೌರವಾಧ್ಯಕ್ಷ ಚಂದ್ರಹಾಸ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ನೂರಾರು ವರ್ಷಗಳ ಹಿನ್ನೆಲೆ ಇರುವ ದೇವಾಲಯವನ್ನು 2013ರಲ್ಲಿ ಜೀರ್ಣೋದ್ಧಾರಗೊಳಿಸಿ ಜಿನ್ನೇನಹಳ್ಳಿ ಗ್ರಾಮದ ಮಧುಸೂದನ್ ಅವರನ್ನು ದೇವಸ್ಥಾನದ ನಿರ್ವಹಣಾ ಕಾರ್ಯವನ್ನು ನೋಡಿಕೊಳ್ಳಲು ನೇಮಿಸಲಾಗಿತ್ತು. ದೇಗುಲಕ್ಕೆ ಸಂಬಂಧಪಟ್ಟ 7.5 ಲಕ್ಷ ರೂ. ವೈಯಕ್ತಿಕ ಖಾತೆಗೆ ಇರಿಸಿಕೊಂಡಿದ್ದು ಅಲ್ಲದೆ ಕಳೆದ 13 ವರ್ಷದ ಲೆಕ್ಕಪತ್ರಗಳನ್ನು ಸರಿಯಾಗಿ ನೀಡದಿರುವುದು ಹಲವು ಅನುಮಾನಗಳನ್ನು ಸೃಷ್ಟಿಸುತ್ತಿದೆ ಎಂದು ತಿಳಿಸಿದರು.

ಗ್ರಾಮದ ಸರ್ವೆ ನಂ. 8 ಮತ್ತು 9 ರಲ್ಲಿ 1.14 ಎಕರೆ ಸರ್ಕಾರಿ ಗೋಮಾಳದಲ್ಲಿ ನೂರಾರು ವರ್ಷಗಳ ಹಳೆಯ ದೇಗುಲ ಇದೆ. 2013ರಲ್ಲಿ ಗ್ರಾಮಸ್ಥರ ಹಾಗೂ ದಾನಿಗಳ ಸಹಕಾರದಿಂದ ಅಭಿವೃದ್ಧಿಗೊಳಿಸಲಾಗಿದೆ. ಹಂತ ಹಂತವಾಗಿ ಅಭಿವೃದ್ಧಿಗೊಳ್ಳುತ್ತಿರುವ ದೇಗುಲವನ್ನು ನೋಡಿಕೊಳ್ಳಲು ಮಧುಸೂದನ್ ಅವರನ್ನು ನೇಮಕ ಮಾಡಲಾಗಿತ್ತು. ಆದರೆ ಈಗ ದೇಗುಲವೇ ನಮ್ಮದು ಎಂಬುದಾಗಿ ಗ್ರಾಮಸ್ಥರನ್ನು ದೂರವಿರಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಗ್ರಾಮಸ್ಥರ ಗಮನಕ್ಕೆ ತರದಂತೆ ತಮಗೆ ಬೇಕಾದವರು ಸೇರಿಸಿಕೊಂಡು ಸಮಿತಿ ರಚನೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ತಕರಾರು ಮತ್ತು ಆಕ್ಷೇಪಣೆ ದೂರನ್ನು ಹಾಸನ ಉಪ ನಿಬಂಧಕರ ಕಚೇರಿಗೆ ಗ್ರಾಮಸ್ಥರ ಸಮ್ಮುಖದಲ್ಲಿ ದೂರು ನೀಡಲಾಗಿದೆ. ಸಮಿತಿಯ ಮೂಲಕ 1.14 ಎಕರೆ ಜಮೀನನ್ನು ತಮ್ಮ ಹೆಸರಿನಲ್ಲಿ ಲಪಟಾಯಿಸಲು ಒಳ ಸಂಚು ಮಾಡುತ್ತಿದ್ದಾರೆ ಎಂದು ದೂರಿದರು.

ಸಿಐಟಿಯು ಮುಖಂಡ ಎಚ್.ಎಸ್.ಮಂಜುನಾಥ್ ಮಾತನಾಡಿ, ತಾಲೂಕು ದಂಡಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆಯೊಂದಿಗೆ ಗ್ರಾಮಸ್ಥರ ಮನವಿ ಗಮನಿಸಿ ದೇಗುಲವನ್ನು ಮುಜರಾಯಿ ಇಲಾಖೆಗೆ ಸೇರಿಸುವುದರ ಜೊತೆಗೆ ಸಂಬಂಧಪಟ್ಟ ಜಮೀನನ್ನು ದೇಗುಲದ ನಿರ್ವಹಣೆ ಸಲುವಾಗಿ ಕಾಯ್ದಿರಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ತೇಜಸ್ ಗೌಡ, ಕಾರ್ಯದರ್ಶಿ ವಾಸು, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋಪಾಲ್, ಮಾಜಿ ಸದಸ್ಯ ದೇವರಾಜು, ರಂಗನಾಥ್, ರೇವಣ್ಣ, ಜಯರಾವ್, ನಂಜುಂಡೇಗೌಡ, ಅಪ್ಪಾಜಿ, ಕುಮಾರ್ ಹಾಗೂ ಇತರರು ಇದ್ದರು.

## ಸ್ಕಾಲರ್ಸ್ ಶಾಲೆಯಲ್ಲಿ ಪೋಕ್ಸೋ ರಸ್ತೆ ಸುರಕ್ಷತೆ ಅರಿವು ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸ್ಕಾಲರ್ಸ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ಟಿಪೋಕ್ಸೋ ಕಾಯ್ದೆ ಹಾಗು ರಸ್ತೆ ಸುರಕ್ಷತೆಟಿ ಕುರಿತ ವಿಶೇಷ ಅರಿವು ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವಕೀಲೆ ಬಿಂದೇಶ್ವರಿ ಹಾಗೂ ಸಖಿ ಒನ್ ಸ್ಟಾಪ್ ಸೆಂಟರ್‌ನ ಆಡಳಿತಾಧಿಕಾರಿ ಸುನಿತಾ ಮಾತನಾಡಿ, ವಿದ್ಯಾರ್ಥಿಗಳು ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ನಡುವಿನ ವ್ಯತ್ಯಾಸ ಅರಿಯಬೇಕು. ಯಾವುದೇ ಅನುಚಿತ ವರ್ತನೆ ಕಂಡುಬಂದರೆ ತಕ್ಷಣವೇ ಪೋಷಕರು ಅಥವಾ ಶಿಕ್ಷಕರ ಗಮನಕ್ಕೆ ತರಬೇಕು ಎಂದರು.

ರಸ್ತೆಯಲ್ಲಿ ಒಂಟಿಯಾಗಿ ಓಡಾಡದಿರುವುದು, ಅಪರಿಚಿತರ ಆಮಿಷಗಳಿಗೆ ಬಲಿಯಾಗದಿರುವುದು ಹಾಗು ಎಷ್ಟೇ ಪರಿಚಿತರಾಗಿದ್ದರೂ ಪೋಷಕರ ಅನುಮತಿ ಇಲ್ಲದೆ ಅವರೊಂದಿಗೆ ಹೋಗದಿರುವ ಬಗ್ಗೆ ಎಚ್ಚರಿಕೆ ನೀಡಿದರು.

ಸಾಮಾಜಿಕ ಜಾಲತಾಣಗಳಿಂದ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚಿವೆ. ಇಂಟರ್‌ನೆಟ್ ಅನ್ನು ಹಿತಮಿತವಾಗಿ ಬಳಸಬೇಕು. ಮಕ್ಕಳು ಬೇರೆಯವರಿಂದ ಯಾವುದೇ ರೀತಿಯ ತೊಂದರೆ ಅನುಭವಿಸಿದರೆ ತಕ್ಷಣವೇ ಅಕ್ಕ ಪಡೆ, ಸಖಿ ಒನ್ ಸ್ಟಾಪ್ ಸೆಂಟರ್ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ನೆರವು ಪಡೆಯಬಹುದು ಎಂದರು.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್.ಎನ್.ಚಂದ್ರಶೇಖರ್ ಮಾತನಾಡಿ, ವಿದ್ಯಾರ್ಥಿಗಳ ಸುರಕ್ಷತೆಗೆ ಶಾಲೆಯು ಆದ್ಯತೆ ನೀಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ವಯಂ ರಕ್ಷಣೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಮುಖ್ಯಶಿಕ್ಷಕಿ ಸಂಧ್ಯಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಶ್ರೀಲಕ್ಷ್ಮಿ ಮತ್ತಿತರರಿದ್ದರು.

## ರಾಷ್ಟ್ರ ನಿರ್ಮಾಣವೇ ಎಬಿವಿಪಿಯ ಧ್ಯೇಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಮಾಡಬೇಕೆನ್ನುವುದು ಎಬಿವಿಪಿಯ ಧ್ಯೇಯ ಎಂದು ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್ ಹೇಳಿದರು.

ಪಟ್ಟಣದ ಗಣಪತಿ ಪೆಂಡಾಲ್ ನಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ಜನಪ್ರಿಯ ಆಸ್ಪತ್ರೆ ಸಹಯೋಗದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ದಿವಸ್ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯಾವ ಸಂಘಟನೆಗಳು ಆ ದೇಶದ ಮಣ್ಣಿಗೆ ಪೂರಕವಾಗಿ ಕೆಲಸ ಮಾಡುತ್ತವೆಯೋ ಆ ಸಂಘಟನೆಗಳು ಬಾನೆತ್ತರಕ್ಕೆ ಬೆಳೆಯುತ್ತವೆ ಎಂಬ ಮಾತನ್ನು ಸ್ವಾಮಿ ವಿವೇಕಾನಂದರು ಹೇಳಿದ್ದರು. ಅದರಂತೆ ಎಬಿವಿಪಿ ಕೆಲಸ ಮಾಡುತ್ತಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಸದಸ್ಯರನ್ನು ಹೊಂದಿದೆ ಎಂದರು.

ಆರ್‌ಎಸ್‌ಎಸ್ ಮುಖಂಡ ಮನೋಹರ್ ಮಾತನಾಡಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ಏಕತೆ ಹಾಗೂ ಸಾಮಾಜಿಕ ಹಿತಾಸಕ್ತಿಗಾಗಿ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಸಂಘಟನೆಯ ಬೆಳವಣಿಗೆಯ ಪಯಣ ಹಾಗೂ ಪ್ರಮುಖ ಸಾಧನೆಗಳ ಕುರಿತು ಅವರು ಮಾಹಿತಿ ನೀಡಿದರು.

ಪರಿಸರ ಪ್ರೇಮಿ ಚ.ನಾ. ಅಶೋಕ್ ಮಾತನಾಡಿದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ತಾಲೂಕು ಘಟಕದ ಸಭಾಪತಿ ಎಚ್.ಜಿ. ಭರತ್ ಕುಮಾರ್, ಕಾರ್ಯದರ್ಶಿ ಸಿ.ಎನ್.ಜಬಿವುಲ್ಲಾ ಬೇಗ್, ಎಬಿವಿಪಿಯ ಜಿಲ್ಲಾ ಪ್ರಮುಖ ಎಂ.ಎನ್.ಕಾಂತರಾಜ್, ನಗರ ಪ್ರಮುಖ ಸೋಮೇಶ್, ಶಿವಮೊಗ್ಗ ವಿಭಾಗ ಸಂಚಾಲಕ ರವಿ ಇರೋಜಿ, ವಿಭಾಗ ಸಂಘಟನಾ ಕಾರ್ಯದರ್ಶಿ ಆದಿತ್ಯ ಶೆಟ್ಟಿ, ರಾಜ್ಯ ಕಾರ್ಯ ಸಮಿತಿ ಸದಸ್ಯ ಸ್ಮಿತಾ ಗೌಡ, ವಿಭಾಗ ವಿದ್ಯಾರ್ಥಿನಿ ಪ್ರಮುಖ್ ಮಮತಾ ಚೌದರಿ,' ಜಿಲ್ಲಾ ಸಂಚಾಲಕ್ ವರುಣ್ ಪುರಾಣಿಕ್, ಜಿಲ್ಲಾ ವಿದ್ಯಾರ್ಥಿನಿ ಪ್ರಮುಖ್ ಸ್ಫೂರ್ತಿ, ಜೀವನ್, ಆದಿತ್ಯ, ಜಗದೀಶ್ ಮತ್ತಿತರರಿದ್ದರು.

## ಆ.2 ರಂದು ಒಕ್ಕಲಿಗರ ಸಂಘದಿಂದ ಪ್ರತಿಭಾ ಪುರಸ್ಕಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕು ಒಕ್ಕಲಿಗರ ಸಂಘದಿಂದ ಆ. 2ರ ಭಾನುವಾರ ಬಿಜಿಎಸ್ ಕಲ್ಯಾಣ ಮಂಟಪದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ತಾಲ್ಲೂಕು ಅಧ್ಯಕ್ಷ ಎ.ವಿ.ಜಯಪಾಲ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮುದಾಯದ ಗ್ರಾಮೀಣ ಪ್ರತಿಭೆಗಳನ್ನು ಬೆನ್ನುತಟ್ಟುವ ಕೆಲಸ ಹಾಗೂ ಈ ಮಕ್ಕಳ ಸಾಧನೆ ಇತರೆ ಮಕ್ಕಳಿಗೂ ಪ್ರೇರಣೆಯಾಗಲಿ ಎಂಬ ಕಾರಣಕ್ಕೆ ಏಳು ವರ್ಷಗಳಿಂದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗುತ್ತಿದೆ. ಈ ಬಾರಿ ಎಸ್ಸೆಸ್ಸೆಲ್ಸಿಯಲ್ಲಿ ಹಾಗೂ ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು ಎಂದು ಹೇಳಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ಒಕ್ಕಲಿಗ ಜನಾಂಗದ 2025-2026ನೇ ವರ್ಷದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 90ಕ್ಕೂ ಅಂಕ ಗಳಿಸಿದ ಮಕ್ಕಳು ಜು. 26ರ ಒಳಗೆ ತಾಲ್ಲೂಕು ಒಕ್ಕಲಿಗರ ಸಂಘದ ಕಚೇರಿಯಿಂದ ಅರ್ಜಿ ಪಡೆದು, ಭರ್ತಿ ಮಾಡಿ ತಮ್ಮ ಅಂಕಪಟ್ಟಿಯೊಂದಿಗೆ ಟಿ.ಸಿ. ನಕಲು ಪ್ರತಿಯೊಂದಿಗೆ 2 ಪಾಸ್‌ಪೋರ್ಟ್ ಆಳತೆಯ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು.

ತಾಲೂಕು ಗೌರವ ಅಧ್ಯಕ್ಷ ಜೆ. ಶಿವೆಗೌಡ, ಪ್ರಧಾನ ಕಾರ್ಯದರ್ಶಿ ಬಿ.ಎನ್.ರವಿ, ಖಜಾಂಚಿ ಬಿ.ರಾಜೇಶ್ ಕುರುವಂಕ, ಕಾನೂನು ಸಲಹಹೆಗಾರ ಜಲೇಂದ್ರ, ಕುಮಾರ್ ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆಗೆ ಉಚಿತ ಡೆಸ್ಕ್ ಕೊಡುಗೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಬೆಂಗಳೂರಿನ ರೋಟರಿ ಕ್ಲಬ್ ಪದಾಧಿಕಾರಿಗಳು ಚಿಕ್ಕ ಅರಕಲಗೂಡು ಕಾಲನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಡೆಸ್ಕ್‌ಗಳನ್ನು ವಿತರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ್ ಅವರು ರೋಟರಿ ಸಂಸ್ಥೆಗೆ ಶಾಲೆಯ ಪರವಾಗಿ ಧನ್ಯವಾದ ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಬ್ಲೂ ಜೆ ಕರುನಾಡು ರೋಟರಿ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮತ್ತು ಕಾರ್ಯದರ್ಶಿ ವೀರೇಶ್ ಆಲೂರು ರವರು ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಸ್ಥಾನಗಳಿಗೇರುವಂತೆ ಆಶಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಅರಕಲಗೂಡು 2026-27ನೇ ಸಾಲಿನ ಅಧ್ಯಕ್ಷ ಡಾ. ಮಹೇಶ್ ಮತ್ತು ಹಿಂದಿನ ಅಧ್ಯಕ್ಷ ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಕುಮಾರ್ ಹನ್ಯಾಳು, ಮುಖ್ಯ ಶಿಕ್ಷಕಿ ಮಂಜುಳಾ, ವಕೀಲ ವಿಜಯಕುಮಾರ್, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಪ್ರಭಾವತಿ, ಶಾಲೆಯ ಸಹ ಶಿಕ್ಷಕರಾದ ಚೈತ್ರ ಮತ್ತು ವೆಂಕಟೇಶ್, ಬ್ಲೂಜೆ ಕ್ಲಬ್‌ನ ಗುಣಶೇಖರ್, ಹರೀಶ್, ಕೇಶವಮೂರ್ತಿ, ಶ್ರೀವಸ್ತ, ಅರಕಲಗೂಡು ಮಿಟ್ಟನ್ ರೋಟರಿ ಕ್ಲಬ್ ಸದಸ್ಯ ಶಶಿಧರ್, ಶಿಕ್ಷಣ ಸಂಯೋಜಕ ಶಿವಪ್ರಕಾಶ್ ಭಾಗವಹಿಸಿದ್ದರು. ಇದೇ ತಂಡ ತಾಲೂಕಿನ ಕಿರಿಯ ಪ್ರಾಥಮಿಕ ಶಾಲೆ ಯಾಚನಕುಪ್ಪೆಗೂ ಉಚಿತವಾಗಿ ಡೆಸ್ಕ್ ವಿತರಿಸಿದರು.

# ಸಿರಿಧಾನ್ಯ ಸೇವಿಸಿ, ಆರೋಗ್ಯವಂತರಾಗಿ: ಧನಲಕ್ಷ್ಮಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಸಿರಿ ಧಾನ್ಯದಲ್ಲಿ ಪೌಷ್ಟಿಕ ಆಹಾರ ಅಧಿಕವಾಗಿರುವುದರಿಂದ ದೇಹಕ್ಕೆ ಅಗತ್ಯವಿರುವ ಶಕ್ತಿ, ಬೆಳವಣಿಗೆ ಮತ್ತು ರೋಗನಿರೋಧಕ ಶಕ್ತಿ ದೊರಕುತ್ತದೆ ಎಂದು ಅರೋಗ್ಯ ಅಧಿಕಾರಿ ಧನಲಕ್ಷ್ಮಿ ಹೇಳಿದರು.

ಕಸಬಾ ಹೋತನಹಳ್ಳಿಪುರ ಕಾರ್ಯ ಕ್ಷೇತ್ರದ ಗ್ರಾಮ ದೇವತೆ ಜ್ಞಾನವಿಕಾಸ ಕೇಂದ್ರದಲ್ಲಿ ಪೌಷ್ಟಿಕ ಆಹಾರ ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿ, ಸೇವಿಸುವ ಆಹಾರದಲ್ಲಿ ಖನಿಜ, ಪ್ರೋಟೀನ್‌ಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಸರಿಯಾದ ಪ್ರಮಾಣದಲ್ಲಿ ಸೇವಿಸುವುದೆ ಪೌಷ್ಟಿಕ ಆಹಾರವಾಗಿದೆ. ಇವುಗಳು ದೇಹದ ಜೀವಕೋಶಗಳನ್ನು ರೂಪಿಸಿ, ದುರಸ್ತಿ ಮಾಡುತ್ತವೆ. ಇದು ದೀರ್ಘಕಾಲದ ಕಾಯಿಲೆಗಳಿಂದ ದೂರವಿರಲು ಮತ್ತು ಆರೋಗ್ಯಕರವಾಗಿರಲು ಅತ್ಯಂತ ಅವಶ್ಯಕವಾಗಿದೆ ಎಂದರು.

ನುಗ್ಗೆಸೊಪ್ಪು ಪ್ರಮುಖ ಪೋಷಕಾಂಶಗಳ ಆಗರವಾಗಿದೆ. ರಕ್ತಹೀನತೆ ನಿವಾರಿಸಲು, ಮಧುಮೇಹ ನಿಯಂತ್ರಿಸಲು, ಜೀರ್ಣಕ್ರಿಯೆ ಸುಧಾರಿಸಲು ಮತ್ತು ಮೂಳೆಗಳನ್ನು ಬಲಪಡಿಸಲು ಇದು ಅತ್ಯುತ್ತಮ. ಇದರಲ್ಲಿ ವಿಟಮಿನ್ ಎ, ಸಿ, ಇ ಮತ್ತು ಕ್ಯಾಲ್ಸಿಯಂ, ಕಬ್ಬಿಣಾಂಶ ಹೇರಳವಾಗಿರುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸೊಪ್ಪು, ತರಕಾರಿ, ಮೊಳಕೆ ಕಾಳನ್ನು ಹೆಚ್ಚಾಗಿ ಉಪಯೋಗಿಸಬೇಕು ಎಂದರು.

ಆಶಾ ಕಾರ್ಯಕರ್ತೆ ಮಂಜುಳಾ ಮಾತನಾಡಿ, ಸೊಪ್ಪುಗಳಲ್ಲಿ ವಿಟಮಿನ್‌ಗಳು, ಖನಿಜಗಳು ಮತ್ತು ನಾರಿನಾಂಶಗಳಿವೆ. ಇವು ಜೀರ್ಣಕ್ರಿಯೆ ಸುಧಾರಿಸಲು, ರಕ್ತಹೀನತೆ ತಡೆಯಲು, ಚರ್ಮದ ಕಾಂತಿ ಹೆಚ್ಚಿಸಲು ಮತ್ತು ರೋಗನಿರೋಧಕ ಶಕ್ತಿ ವೃದ್ಧಿಸಲು ಅತ್ಯಂತ ಅವಶ್ಯಕ. ಕ್ಯಾನ್ಸರ್, ಮಧುಮೇಹ ಮತ್ತು ಸ್ಥೂಲಕಾಯತೆಯ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಅಲ್ಲದೆ ಹೃದ್ರೋಗ ಮತ್ತು ಸಂಧಿವಾತದಂತಹ ಕಾಯಿಲೆಗಳಿಂದ ದೂರವಿರಲು ಸಹಾಯಕವಾಗುತ್ತದೆ. ಕ್ಯಾರೆಟ್ ಮತ್ತು ಬೀಟ್ರೂಟ್ ಜ್ಯೂಸ್ ಅಥವಾ ಸಲಾಡ್ ಸೇವನೆಯು ಆರೋಗ್ಯಕ್ಕೆ ಅತ್ಯುತ್ತಮ ಎಂದರು.

ಸಮಾರಂಭದಲ್ಲಿ ವಲಯ ಮೇಲ್ವಿಚಾರಕರಾದ ವಿಗ್ನೇಶ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಸರಸ್ವತಿ, ಸೇವಾಪ್ರತಿನಿಧಿ ಪವಿತ್ರ, ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

# ಸಕಾರಾತ್ಮಕ ಬದಲಾವಣೆಗೆ ಶಿಕ್ಷಣದ ನೆರವು ಅಧಿಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಸಮಾಜದಲ್ಲಿ ಶಾಶ್ವತ ಬದಲಾವಣೆ ತರಲು ಶಿಕ್ಷಣವೇ ಪ್ರಮುಖ ಕಾರಣವಾಗಿದೆ ಎಂದು ಶಾಸಕ ಎ.ಮಂಜು ಹೇಳಿದರು.

ಪಟ್ಟಣದ ಶ್ರೀ ಗುರು ವಿಜಯಸಿದ್ಧ ಶಿವದೇವ ಮಂಗಳ ಮಂದಿರದಲ್ಲಿ ಮಲೆನಾಡು ಪದವಿ ಪೂರ್ವ ಕಾಲೇಜು ವತಿಯಿಂದ ಆಯೋಜಿಸಿದ್ದ ಸ್ವಾಗತ ಹಾಗೂ ಅಭಿನಂದನಾ ಸಮಾರಂಭ ಮತ್ತು ವಿದ್ಯಾರ್ಥಿಗಳ ಕನಸುಗಳ ಬೆನ್ನೇರಿ ಸಾಧನೆಯ ಶಿಬಿರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ. ಶಿಕ್ಷಣವಿಲ್ಲದೆ ಮನೆ, ಊರು, ತಾಲೂಕು ಹಾಗೂ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಶಿಕ್ಷಣವು ವ್ಯಕ್ತಿಯನ್ನು ಪರಿವರ್ತಿಸಿ, ಜೀವನದ ಗುರಿಯನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತದೆ ಎಂದು ಹೇಳಿದರು.

ಇಂದಿನ ದಿನಗಳಲ್ಲಿ ಕೆಲ ವಿದ್ಯಾರ್ಥಿಗಳು ಮಾದಕ ವ್ಯಸನಗಳತ್ತ ಆಕರ್ಷಿತರಾಗುತ್ತಿರುವುದು ವಿಷಾದನೀಯ. ಯಾವುದೇ ವಿದ್ಯಾರ್ಥಿಯೂ ಮಾದಕ ವಸ್ತುಗಳು ಅಥವಾ ಇತರ ದುಶ್ಚಟಗಳಿಗೆ ಬಲಿಯಾಗಬಾರದು. ತಮ್ಮ ಭವಿಷ್ಯವನ್ನು ಉತ್ತಮ ಶಿಕ್ಷಣ ಹಾಗೂ ಉತ್ತಮ ಮೌಲ್ಯಗಳ ಮೂಲಕ ರೂಪಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ್, ಪ್ರಾಂಶುಪಾಲ ಶಶಿಕುಮಾರ್, ಯದುನಂದನ್, ಕಾರ್ಯದರ್ಶಿ ಬಿ.ಆರ್.ಜಯಪ್ರಕಾಶ್, ಉಪನ್ಯಾಸಕ ವೃಂದ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಗತ್ತು ಒಂದು ಇಲಿ ಬಲೆ!

ಮಾನವ ಜೀವನದ ಸತ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ರೂಪಕಗಳಲ್ಲಿ ಇಡೀ ಜಗತ್ತೇ ಒಂದು ಇಲಿ ಬಲೆ ಎಂಬ ಕಲ್ಪನೆ ವಿಶಿಷ್ಟವಾದುದು. ಬಲೆಯೊಳಗಿನ ಆಹಾರವು ಇಲಿಯನ್ನು ಹೇಗೆ ಆಕರ್ಷಿಸುತ್ತದೆಯೋ ಹಾಗೆಯೇ ಹಣ, ಅಧಿಕಾರ, ಆಸ್ತಿ, ಸೌಂದರ್ಯ ಹಾಗೂ ಕೀರ್ತಿಯಂತಹ ಮಿನುಗುವ ಆಸೆಗಳು ಮನುಷ್ಯನ ಮನಸ್ಸನ್ನು ಸೆಳೆಯುತ್ತವೆ. ಆ ಆಸೆಗಳ ಬೆನ್ನತ್ತಿದಾಗ ಅವನು ತನ್ನ ಸ್ವಾತಂತ್ರ್ಯ, ನೆಮ್ಮದಿ, ಸಂಬಂಧಗಳು ಮತ್ತು ಮಾನವೀಯತೆಯನ್ನೇ ಕಳೆದುಕೊಳ್ಳುವ ಅಪಾಯ ಎದುರಾಗುತ್ತದೆ.

ಬಡವನಾಗಲಿ, ಶ್ರೀಮಂತನಾಗಲಿ, ವಿದ್ಯಾವಂತನಾಗಲಿ ಅಥವಾ ಸಾಮಾನ್ಯನಾಗಲಿ, ದುರಾಸೆ ಮತ್ತು ಸ್ವಾರ್ಥದ ಬಲೆಗೆ ಸಿಲುಕಿದ ಕ್ಷಣದಿಂದ ಜೀವನದ ನಿಜವಾದ ಮೌಲ್ಯಗಳು ಮರೆಯಾಗುತ್ತವೆ. ಆದರೆ ಪ್ರೀತಿ, ಕರುಣೆ, ಸತ್ಯನಿಷ್ಠೆ, ನಂಬಿಕೆ ಮತ್ತು ಕ್ಷಮೆ ಮನುಷ್ಯನನ್ನು ಆ ಬಂಧನದಿಂದ ಬಿಡುಗಡೆ ಮಾಡುವ ನೈತಿಕ ಶಕ್ತಿಗಳಾಗಿವೆ.

ನಿಜವಾದ ಸಂಪತ್ತು ಬ್ಯಾಂಕಿನ ಖಾತೆಯಲ್ಲಿ ಇರುವ ಹಣವಲ್ಲ; ವ್ಯಕ್ತಿತ್ವದಲ್ಲಿ ಅಡಗಿರುವ ಒಳ್ಳೆಯತನ, ಪ್ರಾಮಾಣಿಕತೆ ಮತ್ತು ಮಾನವೀಯತೆಯೇ ಜೀವನದ ಶಾಶ್ವತ ಸಂಪತ್ತು.

ಈ ಕಥೆ ಮತ್ತೊಂದು ಶ್ರೇಷ್ಠ ಸಂದೇಶವನ್ನೂ ಸಾರುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲೂ ಬದಲಾವಣೆಯ ಬೀಜ ಅಡಗಿದೆ. ತಪ್ಪು ಮಾಡಿದವನನ್ನು ತಿರಸ್ಕರಿಸುವುದಕ್ಕಿಂತ ಅವನಿಗೆ ಪ್ರೀತಿ, ವಿಶ್ವಾಸ ಮತ್ತು ಅವಕಾಶ ನೀಡಿದರೆ, ಅವನು ಸಮಾಜಕ್ಕೆ ಮಾದರಿಯಾಗುವ ವ್ಯಕ್ತಿಯಾಗಿ ರೂಪುಗೊಳ್ಳಬಹುದು. ಶಿಕ್ಷೆಗಿಂತ ಸಹಾನುಭೂತಿ ಮತ್ತು ವಿಶ್ವಾಸವೇ ಸಮಾಜವನ್ನು ಹೆಚ್ಚು ಸುಂದರ ಹಾಗೂ ಸೌಹಾರ್ದಯುತವಾಗಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಜನರು ಯಶಸ್ಸಿನ ಬೆನ್ನಟ್ಟುವಾಗ ಸಂಬಂಧಗಳು, ಆರೋಗ್ಯ, ಮನಸ್ಸಿನ ಶಾಂತಿ ಮತ್ತು ಸಂತೋಷವನ್ನು ನಿರ್ಲಕ್ಷಿಸುತ್ತಿದ್ದಾರೆ. ನಿಜವಾದ ಯಶಸ್ಸು ಎಂದರೆ ಹೆಚ್ಚು ಸಂಪಾದಿಸುವುದಲ್ಲ; ಮನಸ್ಸಿನ ನೆಮ್ಮದಿಯೊಂದಿಗೆ, ಸತ್ಪ್ರವೃತ್ತಿಯಿಂದ ಮತ್ತು ಇತರರ ಬದುಕಿಗೆ ಬೆಳಕಾಗುವಂತೆ ಬದುಕುವುದಾಗಿದೆ.ಆಸೆಗಳ ಬಲೆಗೆ ಸಿಲುಕಬೇಡಿ. ದುರಾಸೆ ಕ್ಷಣಿಕ ಸುಖವನ್ನು ನೀಡಬಹುದು. ಆದರೆ ಮಾನವೀಯತೆ ಶಾಶ್ವತ ಗೌರವವನ್ನು ನೀಡುತ್ತದೆ. ಪ್ರಾಮಾಣಿಕತೆ ನಮ್ಮ ವ್ಯಕ್ತಿತ್ವವನ್ನು ಎತ್ತರಕ್ಕೇರಿಸುತ್ತದೆ. ಕರುಣೆ ನಮ್ಮ ಹೃದಯವನ್ನು ಶ್ರೀಮಂತಗೊಳಿಸುತ್ತದೆ. ನಾವು ಇತರರ ಬದುಕಿನಲ್ಲಿ ಆಶಾಕಿರಣವಾದಾಗ ಮಾತ್ರ ನಮ್ಮ ಜೀವನಕ್ಕೂ ನಿಜವಾದ ಅರ್ಥ ದೊರೆಯುತ್ತದೆ. ಜಗತ್ತನ್ನು ಬದಲಾಯಿಸುವ ಮಹಾಶಕ್ತಿ ನಮ್ಮ ಒಳ್ಳೆಯ ಹೃದಯದಲ್ಲಿದೆ. ಆದ್ದರಿಂದ ದುರಾಸೆಯ ಬಲೆಯಿಂದ ಹೊರಬಂದು ಪ್ರೀತಿ, ನಂಬಿಕೆ ಮತ್ತು ಮಾನವೀಯತೆಯ ಮಾರ್ಗದಲ್ಲಿ ಸಾಗೋಣ. ಅದುವೇ ನಿಜವಾದ ಯಶಸ್ಸು, ಅದುವೇ ಅರ್ಥಪೂರ್ಣ ಜೀವನ.



-ಅಂತೋಣಿ ಮುತ್ತು ವಿ.
ಶಿಕ್ಷಕರು ಮೊ:7259675543

# ಇತಿಹಾಸದಲ್ಲಿ ಈ ದಿನ

## ಜುಲೈ-11

1302: ಫ್ಲೆಮಿಷ್ ಪಡೆಗಳು ಫ್ರಾನ್ಸ್ ಸೇನೆಯನ್ನು ಸೋಲಿಸಿದ ಪ್ರಸಿದ್ಧ ಗೋಲ್ಡನ್ ಸ್ಪರ್ಸ್ ಯುದ್ಧ ನಡೆಯಿತು.

1804: ಅಮೆರಿಕದ ಮಾಜಿ ಹಣಕಾಸು ಸಚಿವ ಅಲೆಕ್ಸಾಂಡರ್ ಹ್ಯಾಮಿಲ್ಟನ್ ದ್ವಂದ್ವ ಯುದ್ಧದಲ್ಲಿ ಗಾಯಗೊಂಡು ನಿಧನರಾದರು.

1893: ಜಪಾನ್‌ನ ಮೊದಲ ಅಧಿಕೃತ ರಾಜಕೀಯ ಪಕ್ಷಗಳಲ್ಲಿ ಒಂದಾದ ಮಿನ್ಸೆ ಯಿಟೋ ಸ್ಥಾಪನೆಯಾಯಿತು.

1960:ಯುಲ್ ಬ್ರೈನರ್ ಅಭಿನಯದ ದಿ ಮ್ಯಾಗ್ನಿಫಿಸೆಂಟ್ ಸೆವನ್ ಚಲನಚಿತ್ರ ಬಿಡುಗಡೆಯಾಯಿತು.

1966: ಅಮಿತಾಭ್ ಬಚ್ಚನ್ ಅವರು ಕೋಲ್ಕತ್ತಾದಲ್ಲಿ ತಮ್ಮ ಮೊದಲ ಉದ್ಯೋಗವನ್ನು ಆರಂಭಿಸಿದ ದಿನವೆಂದು ದಾಖಲಿಸಲಾಗಿದೆ.

1979: ಅಮೆರಿಕದ ಬಾಹ್ಯಾಕಾಶ ಕೇಂದ್ರ ಸ್ಕೈಲ್ಯಾಬ್ ಭೂಮಿಗೆ ಬಿದ್ದು ತನ್ನ ಕಾರ್ಯಾಚರಣೆಯನ್ನು ಅಂತ್ಯಗೊಳಿಸಿತು.

1987: ವಿಶ್ವದ ಜನಸಂಖ್ಯೆ 5 ಶತಕೋಟಿ ತಲುಪಿದ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಜುಲೈ 11 ಅನ್ನು ವಿಶ್ವ ಜನಸಂಖ್ಯಾ ದಿನವಾಗಿ ಆಚರಿಸಲು ನಿರ್ಧರಿಸಿತು.

2006: ಭಾರತದ ಮುಂಬೈನಲ್ಲಿ ಸರಣಿ ರೈಲು ಬಾಂಬ್ ಸ್ಫೋಟಗಳು ಸಂಭವಿಸಿ ನೂರಾರು ಮಂದಿ ಮೃತಪಟ್ಟರು.

### ಜನನ

1857: ಈಸ್ಟ್‌ಮನ್ ಜಾನ್ಸನ್

1934: ಜಾರ್ಜಿಯೊ ಅರ್ಮಾನಿ

### ನಿಧನ

1804: ಅಲೆಕ್ಸಾಂಡರ್ ಹ್ಯಾಮಿಲ್ಟನ್

# ಕೇಳಿಸಿಕೊಳ್ಳಬೇಕಿದೆ ಪಶ್ಚಿಮ ಘಟ್ಟದ ಎಚ್ಚರಿಕೆಯ ಗಂಟೆ

- ವಿಶ್ವಾಸ್ ಡಿ.ಗೌಡ

ಪ್ರಕೃತಿ ಮನುಷ್ಯನ ಶತ್ರುವಲ್ಲ. ಆದರೆ ಪ್ರಕೃತಿಯ ನಿಯಮಗಳನ್ನು ನಿರ್ಲಕ್ಷಿಸಿದಾಗ ಅದು ನೀಡುವ ಪ್ರತಿಕ್ರಿಯೆ ಮಾತ್ರ ಭೀಕರವಾಗಿರುತ್ತದೆ. ಪಶ್ಚಿಮ ಘಟ್ಟದ ಬೆಟ್ಟಗಳು, ಕಾಡುಗಳು ಹಾಗೂ ನದಿಗಳು ಜೀವಜಗತ್ತಿನ ಅಮೂಲ್ಯ ಸಂಪತ್ತು. ಆದರೆ ಕಳೆದ ನಾಲ್ಕು ದಶಕಗಳಿಂದ ಈ ಪ್ರದೇಶದಲ್ಲಿ ಮರುಕಳಿಸುತ್ತಿರುವ ಭೂಕುಸಿತಗಳು ಅಭಿವೃದ್ಧಿಯ ಹೆಸರಿನಲ್ಲಿ ನಾವು ಮಾಡಿದ ತಪ್ಪುಗಳ ಪರಿಣಾಮವನ್ನು ಸ್ಪಷ್ಟವಾಗಿ ತೋರಿಸುತ್ತಿವೆ. ಇತ್ತೀಚಿನ ಕಲ್ಲಾಡಿ ಸುರಂಗ ನಿರ್ಮಾಣ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತ ಮತ್ತೊಮ್ಮೆ ನಮ್ಮನ್ನು ಆತ್ಮಾವಲೋಕನಕ್ಕೆ ಕರೆದೊಯ್ಯುತ್ತಿದೆ.

ಪಶ್ಚಿಮ ಘಟ್ಟದಲ್ಲಿ ಭೂಕುಸಿತ ಹೊಸ ಸಂಗತಿಯಲ್ಲ. 1984ರಲ್ಲಿ ಬೆಳ್ಳರಿಮಾಲ ಬೆಟ್ಟಗಳಲ್ಲಿ ಸಂಭವಿಸಿದ ಭೀಕರ ಕುಸಿತದಲ್ಲಿ 14 ಜನರು ಪ್ರಾಣ ಕಳೆದುಕೊಂಡರು. ಅದು ಈ ಪ್ರದೇಶದ ಭೌಗೋಳಿಕ ದುರ್ಬಲತೆಯ ಮೊದಲ ದೊಡ್ಡ ಎಚ್ಚರಿಕೆಯಾಗಿತ್ತು. ನಂತರ 1992ರಲ್ಲಿ ಸುರಿದ ಭಾರೀ ಮಳೆಯಿಂದ ಮತ್ತೆ ಹಲವು ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿತು. ಪ್ರಕೃತಿ ಮರುಮರು



ಎಚ್ಚರಿಕೆ ನೀಡುತ್ತಿದ್ದರೂ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳು ಸಮರ್ಪಕವಾಗಿ ಜಾರಿಯಾಗಲಿಲ್ಲ.

2019ರಲ್ಲಿ ಮೇಪ್ಪಾಡಿ ಪಂಚಾಯಿತಿಯ ಮತ್ತುಮಲ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತು. ಅನೇಕ ಕುಟುಂಬಗಳು ಮನೆ, ಆಸ್ತಿ ಮತ್ತು ಆತ್ಮೀಯರನ್ನು ಕಳೆದುಕೊಂಡವು. ಒಂದು ಸಂಪೂರ್ಣ ಪ್ರದೇಶವೇ ಮಣ್ಣಿನಡಿ ಹೂತುಹೋಗುವಂತಹ ದುರಂತವು ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಎಷ್ಟು ಅಗತ್ಯ ಎಂಬುದನ್ನು ಮನಗಾಣಿಸಿತು.

2024ರಲ್ಲಿ ಸುರಿದ ದಾಖಲೆ ಪ್ರಮಾಣದ ಮಳೆಯು ಪರಿಸ್ಥಿತಿಯನ್ನು ಇನ್ನಷ್ಟು ಭೀಕರಗೊಳಿಸಿತು. ಅಲ್ಪ ಅವಧಿಯಲ್ಲೇ ಅತಿ ಹೆಚ್ಚು ಮಳೆ ಸುರಿದ ಪರಿಣಾಮ ಮುಂಡಕ್ಕೈ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೂರಾರು ಜೀವಗಳು ಬಲಿಯಾದವು. ಮನೆಗಳು, ರಸ್ತೆಗಳು, ಸೇತುವೆಗಳು ಹಾಗೂ ಜೀವನೋಪಾಯಗಳು ಕ್ಷಣಾರ್ಧದಲ್ಲಿ ಕೊಚ್ಚಿಹೋದವು. ಇದು ಕೇವಲ ಪ್ರಕೃತಿ ವಿಕೋಪವಲ್ಲ; ಪರಿಸರ ನಿರ್ವಹಣೆಯ ವೈಫಲ್ಯದ ಸಂಕೇತವೂ ಆಗಿತ್ತು.

ಈಗ ಕಲ್ಲಾಡಿ ಸುರಂಗ ನಿರ್ಮಾಣ ಪ್ರದೇಶದಲ್ಲಿ ಸಂಭವಿಸಿರುವ ಮಣ್ಣು ಕುಸಿತ ಮತ್ತೊಮ್ಮೆ ಅದೇ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟಿದೆ. ಸುರಂಗ ನಿರ್ಮಾಣ, ರಸ್ತೆ ವಿಸ್ತರಣೆ, ಅತಿಯಾದ ಬೆಟ್ಟ ಕತ್ತರಿಸುವಿಕೆ ಹಾಗೂ ಭಾರೀ ಯಂತ್ರೋಪಕರಣಗಳ ಬಳಕೆ ಈಗಾಗಲೇ ದುರ್ಬಲವಾಗಿರುವ ಭೂಪದರದ ಮೇಲೆ ಹೆಚ್ಚುವರಿ ಒತ್ತಡ ಉಂಟುಮಾಡುತ್ತದೆ. ಅದರ ಜೊತೆಗೆ ನಿರಂತರ ಮಳೆ ಸೇರಿಕೊಂಡಾಗ ಭೂಕುಸಿತದ ಅಪಾಯ ಹಲವು ಪಟ್ಟು ಹೆಚ್ಚಾಗುತ್ತದೆ.

ಈ ದುರಂತಗಳ ಹಿಂದೆ ಇರುವ ಪ್ರಮುಖ ಕಾರಣಗಳಲ್ಲಿ ಕಾಡುಗಳ ನಾಶ ಮೊದಲ ಸ್ಥಾನದಲ್ಲಿದೆ. ಮರಗಳ ಬೇರುಗಳು ಮಣ್ಣನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವ ನೈಸರ್ಗಿಕ ವ್ಯವಸ್ಥೆಯಾಗಿದೆ. ಕಾಡುಗಳು ನಾಶವಾದಾಗ ಮಣ್ಣು ತನ್ನ ಹಿಡಿತ ಕಳೆದುಕೊಳ್ಳುತ್ತದೆ. ಪರಿಣಾಮವಾಗಿ ಭಾರೀ ಮಳೆಯ ಸಮಯದಲ್ಲಿ ಬೆಟ್ಟಗಳು ಸುಲಭವಾಗಿ ಕುಸಿಯುತ್ತವೆ.

# ಮೋಣು - 2

ಧನಂಜಯ ಜೀವಾಳ ಬಿ.ಕೆ.

ಗ್ರಾಮಾಯಣ-18

ಅವತ್ತು ದೆಬ್ಬಳ್ಳಿ ಊರೊಟ್ಟಿನ ಚೌಡಿ ಹಬ್ಬ. ಕಾಡ್ಕಣದ ಪಕ್ಕದ ಕಾಫಿತೋಟದ ಒಳಗಿನ ಹಲಸಿನ ಮರದ ಬುಡದಲ್ಲಿ ಪೂಜಿಸಲಾಗುವ ದೇವರಕಲ್ಲಿಗೆ ಹಂದಿ ಬಲಿಕೊಟ್ಟು, ದೇವರಿಗೆ ನೈವೇದ್ಯ ಮಾಡಿ, ಊರೆಲ್ಲರಿಗೂ ಬಾಡಿನೂಟ ಹಾಕುವ ಸಡಗರದ ಸಂಭ್ರಮ. ಹಲಸಿನ ಮರದ ಬುಡದ ಪೂರ್ವಭಾಗದಲ್ಲಿ ಮೂರಡಿ ಮೂರಡಿ ಅಳತೆಯ ಚಿಕ್ಕ ಚಪ್ಪರವನ್ನು ಹಾಕಿ ಮೂರು ಸುತ್ತಲೂ ಬೈನೇಉಲಿಯ ಎಲೆಯನ್ನು ಗೋಡೆಯಂತೆ ಕಟ್ಟಲಾಗಿತ್ತು. ದೇವರ ಕಲ್ಲಿನ ಎದುರಿನಲ್ಲಿ ಹಾಲುವಾಣ ಮರದ ಗೆಲ್ಲಿನಲ್ಲಿ + ಆಕಾರದಲ್ಲಿ ಆಕೃತಿಯೊಂದನ್ನು ರಚಿಸಿ, ಅದರ ಬುಡದಲ್ಲಿ ಬಾಳೆಲೆಯೊಂದನ್ನು ಹಾಸಿ, ಸ್ವಲ್ಪ ಅಕ್ಕಿ ಹರಡಿ, ಆಕಾರಕ್ಕೆ ಅರಸಿನ ಕುಂಕುಮ ಹಚ್ಚಿ, ಕಾಲ್ಕಟ್ಟಿದ ಹಂದಿಯನ್ನು, ದೈಹಿಕವಾಗಿ ಬಲವಾಗಿದ್ದ ಮೂರ್ನಾಲ್ಕು ಜನ ಬಲವಾಗಿ ಹಿಡಿದುಕೊಂಡರು. ಊರಿಗೂರೇ ದಿಗಿಲುಗೊಳ್ಳುವಂತೆ ಅರಚುವ ಹಂದಿಯ ಬಾಯನ್ನು ಬಲವಾದ ಹಗ್ಗದಿಂದ ಬಂಧಿಸಿದ್ದರು. ಬಲಿ ಕೊಡುವ ಸಂದರ್ಭಕ್ಕೆ ಕಾಲು ಮತ್ತು ಬಾಯಿಗೆ ಕಟ್ಟಿದ್ದ ಹಗ್ಗವನ್ನು ಕತ್ತಿಯಿಂದ ಕೊಯ್ದು ಕಟ್ಟನ್ನು ಸಡಿಲಗೊಳಿಸಿ, ಕುತ್ತಿಗೆಯ ಭಾಗವು ಬಾಳೆಲೆಯ ಮೇಲೆ ಬಂದು, ಕತ್ತು ಕತ್ತರಿಸಿದಾಗ ಹೊರಚೆಲ್ಲುವ ರಕ್ತ ಆ + ಆಕಾರದ ಮೇಲೆ ಸಿಂಚನವಾಗುವಂತೆ ಹಿಡಿದುಕೊಳ್ಳಲು ನಾರಾಯಣ, ಜಗದೀಶ, ಮಂಜುನಾಥ, ಸಣ್ಣೇಗೌಡ ಸಿದ್ದರಾದರು. ಬೆಳಗಿನಿಂದಲೂ ಮಡಿಯಿದ್ದು ಆಹಾರ ಸೇವಿಸದೇ ಹಸ್ಕೊಂಡಿರುವಟ ಬೆಳ್ಳಾಚಾರಿ ಬಾಯಿಗೆ ಬಟ್ಟೆ ಕಟ್ಟಿಕೊಂಡು, ಹರಿತವಾದ ಕತ್ತಿಯಿಂದ ಹಂದಿಯ ಕುತ್ತಿಗೆಯನ್ನು ಚರಚರನೆ ಕೊಯ್ದು ಬಲಿಕೊಡುವ ಶಾಸ್ತ್ರ ಪೂರೈಸಿದ. ಕುಕ್ಕರನೆ ಕೂತುಕೊಂಡು ಹಂದಿ ಬಾಯಿಯನ್ನು ಎರಡೂ ಅಂಗೈಯೊಳಗೆ ಸೇರಿಸಿಕೊಂಡು ಹಿಸುಕಿ ಹಿಡಿದುಕೊಂಡಿದ್ದ ನಾರಾಯಣ ಉಟ್ಟಿದ್ದ ಲುಂಗಿ ಅದ್ಹೆಂಗೋ ಸಡಿಲವಾಗಿ ಬಿಚ್ಚಿಕೊಂಡಿತು. ಕೂತವನಿಗೆ ಎದ್ದು ನಿಲ್ಲಲು ಸರಿಯಾದ ಬ್ಯಾಲೆನ್ಸ್ ಸಿಕ್ಕದೇ ಹಂದಿ ಮುಷ್ಟಿ ಹಿಡಿದಿದ್ದ ಕೈಯನ್ನು ನೆಲಕ್ಕೂ ಊರಲಾಗದೇ ಮೊಣಕೈಯನ್ನೇ ನೆಲಕ್ಕೆ ಕೊಟ್ಟು ನಿಲ್ಲಲು ತಡಬಡಾಯಿಸಿದ. ಹಂಗೂ ಹಿಂಗೂ ಮಾಡಿ ಎದ್ದವನ ಕಾಲಿನ ಸುತ್ತ ಉಟ್ಟಿದ್ದ ಲುಂಗಿ ಸಿಂಬಿ ಸುತ್ತಿದಂತೆ ಬಿದ್ದು ಮೂರ್ನಾಲ್ಕು ತೂತಾಗಿದ್ದ ಹಳೇ ಪೂಂಬುಕಾರ್ ಚಡ್ಡಿಯೇ ಅವನಿಗೆ ಅಂತಿಮ ಆಸರೆಯಾಯ್ತು.

ಪ್ರತೀ ಚೌಡೀ ಹಬ್ಬದಲ್ಲೂ ಯಾವುದಾದರೂ ಕಾರಣಕ್ಕೆ ಜಗಳ ತೆಗೆದು ಕಿತಾಪತಿ ಮಾಡುತಿದ್ದ ಉಮಾಪತಿ ಸುಮ್ಮನಿರಲಾರದೇ ಯಂತಾ ಶಾಟುದ್ ಲುಂಗಿ ಕಟ್ತೀರಿ ಮಾರಾಯ ಎಂದ. ಬೆಳಿಗ್ಗೆಯಿಂದಲೂ ಚೌಡಿಬನದ ಅಂಗಳವನ್ನು ಹೆರೆದು ಅಚ್ಚುಕಟ್ಟು ಮಾಡಿ, ಪಕ್ಕದ ಬೀಜುವಳ್ಳಿಯ ಯಲ್ಲಪ್ಪನ ಹಂದಿ ಫಾರಮ್ಮಿನಿಂದ ಹಂದಿಯನ್ನು ತರಲು ಹೋಗಿದ್ದ ನಾರಾಯಣನಿಗೆ ಉಮಾಪತಿಯ ಮಾತಿನಿಂದ ರೇಗಿಹೋಯ್ತು. ಈ ಹಂದಿ ಕುಯ್ಯಲು ಕೂತಾಗ ಅವನ ಅಂಡರ್ವೇರ್ ಜೇಬಿನಲ್ಲಿದ್ದ ಬೀಡಿಯ ಕಟ್ಟು ಬೇರೆ ಪಜ್ಜಿಯಾಗಿ ಬೀಡಿಗಳು ಮುರಿದುಹೋಗಿದ್ದವು. ನನ್ಮಕ್ಳಾ, ನೀವು ಅಣ್ತಮ್ಮುದ್ರು ಬರೀ ಯಜ್ಮಾನ್ಕೆ ಕಿಸಿಯಕ್ಕೆ ಬರ್ಬೇಡಿ. ಮುಕ್ಳಿ ಬಗ್ಸಿ ಊರೊಟ್ಟಿನ ಕೆಲ್ಸ ಮಾಡಿ ಎಂದ.

ಇಸ್ಪೀಟಾಟ, ಮಾಂಸದೂಟ ಎಂದು ಸುಮಾರಾಗಿ ಕಳ್ಳಭಟ್ಟಿಯನ್ನು ಏರಿಸಿಕೊಂಡೇ ಬಂದಿದ್ದ ಉಮಾಪತಿಗೆ ಅಪಮಾನವಾದಂತಾಗಿ ನಿನ್ನವ್ವನ್, ಊರೊಟ್ಟಿನ ಚೌಡಿ ಎಂದ್ರೆ ನಿನ್ನಪ್ಪನ್ದಾ? ಎಂದವನೇ ಬಡಿದಾಡಲು ಪಕ್ಕದಲ್ಲಿದ್ದ ಹಾಲುವಾಣ ಗೂಟವನ್ನು ಕಿತ್ತುಕೊಳ್ಳಲು ಅಣಿಯಾದ. ಇತ್ತ ನಾರಾಯಣ ಅಡುಗೆ ಒಲೆಗೆ ಹಾಕಲು ತಂದಿದ್ದ ಸೌದೆಯಲ್ಲಿದ್ದ ಸರ್ರಿಯಾದ ದಡಿಯನ್ನೇ ಹಿಡಿದು ನಿಂತ. ಅಷ್ಟರಲ್ಲಿ ಬೆಳ್ಳಾಚಾರಿ, ನೀವು ಹಿಂಗೆ ಹೊಡೆದಾಡದಾದ್ರೆ ಈ ಚೌಡಿ ಮಾರಿನೆಲ್ಲ ಯಾಕೆ ಮಾಡ್ತೀರಿ? ನಮ್ಮನ್ನೂ ಬೆಳಗಿನಿಂದ ಉಪಾಸ ಕೆಡಗಿ, ಮುಂದಿನ ವರ್ಷದಿಂದ ನಾನು ಈ ಚೌಡಿ ಪೂಜಕ್ಕೇ ಬರಲ್ಲ, ಓ ನಾಗೇಸಣ್ಣ, ಪ್ರಕಾಸಣ್ಣ ಬನ್ನಿ ಬನ್ನಿ; ಹೊಡ್ದಾಟ ಬಿಡ್ಸಿ ಎಂದು ಬಾಯ್ಮಾಡಕ್ಕೆ ಶುರೂ ಮಾಡಿದ.

ನಾಲ್ಕಾರು ಜನ ಬಂದು ಉಮಾಪತಿಗೆ ಉಗಿದು, ನೋಡಾ ಮಾರಾಯ, ಊರೊಟ್ಟಿನ ಚೌಡಿಗೆ ಬಂದೀಯ, ಉಂಡ್ಕಂಡ್ ಹೋಗ್ಬೇಕಷ್ಟೆ. ಅವ ಲುಂಗಿ ನಾದ್ರೂ ಉಡ್ಲಿ ಇಲ್ಲಾ ಹಂಗೇನಾದ್ರೂ ಬರ್ಲಿ, ಅದು ನಿಂಗೆ ಬೇಡ. ಮುಂದಿನ ವರ್ಷ ಊರೊಟ್ಟಿನ ಕೆಲ್ಸ ನಿಮ್ ಪಾಲಿಂದು ತಾನೇ, ಆಗ ನೀನ್ಹೇಗೆ ಮಾಡ್ತೀಯ ನೋಡನಂತೆ ಎಂದು ಗದರಿಸಿದರು.

ಪ್ರಳಯಾಂತಕ ಕಿತಾಪತಿಯಾದ ಈ ಉಮಾಪತಿ ತನ್ನ ಪರ ಯಾರೂ ಮಾತನಾಡದ್ದನ್ನು ಕಂಡು ಸುಮ್ಮನಾದರೂ ಗುರುಗುರು ಎನ್ನುತ್ತಲೇ ಇದ್ದ. ಎಂಟ್ಹತ್ತು ಜನ ಸೇರಿ ಹಂದಿ ರಿಪೇರಿ ಮಾಡಿ, ಸುಟ್ಟು ಹೆರೆದು, ಬಾಳೆಲೆಯ ಹಂಪುಹಾಕಿ, ಅಡುಗೆಗೆ ಮಾಂಸವನ್ನು ಸಿದ್ದಪಡಿಸಿದರು. ಹಂದಿಯ ಈರಿಯನ್ನು ತೆಳುವಾದ ಹಸಿಕೋಲೊಂದಕ್ಕೆ ಪೋಣಿಸಿ ಉಪ್ಪು ಸವರಿ ಸುಟ್ಟು, ಆ ಕೋಲನ್ನು ಚಪ್ಪರದ ಎರಡೂ ಬದಿಯ ನೆಲಕ್ಕೆ ಚುಚ್ಚಲಾಯ್ತು. ಹಸಿ ಕೋಲಿಗೆ ಎಣ್ಣೆಯಲ್ಲಿ ನೆನೆಸಿದ ಹತ್ತಿಯ ಮಡಿಬಟ್ಟೆಯನ್ನು ಸುತ್ತಿ ಅದನ್ನು ದೀಪದಂತೆ ಉರಿಸಲಾಯ್ತು.



ದೇವರಿಗೆ ನೈವೇದ್ಯ ಮಾಡಲು ಖಾರಾ ಹಾಕದೇ ಬರೀ ಉಪ್ಪು ಮತ್ತು ಅರಸಿನಪುಡಿ ಹಾಕಿ ಮಾಂಸ ಬೇಯಿಸಿದ ನಂತರ, ಬಿಸಿಬಿಸೀ ಕೆಂಪಕ್ಕಿಯ ಅನ್ನದ ಜೊತೆ ದೇವರಿಗೆ ಅರ್ಪಿಸಲಾಯ್ತು.

ಬರೀ ಉಪ್ಪು, ಅರಿಸಿನದೊಂದಿಗೆ ಬೇಯಿಸಿದ್ದ ಮಾಂಸಕ್ಕೆ ಈಗ ಶುಂಠಿ-ಬೆಳ್ಳುಳ್ಳಿ ಪೇಸ್ಟು, ಕೆಂಪುಮೆಣಸಿನಪುಡಿ, ಕಾಳುಮೆಣಸಿನಪುಡಿ, ಹುರಿದ ಧನಿಯಾಪುಡಿಯನ್ನು ಬೆರೆಸಿ, ಒಂದಷ್ಟು ಹೊತ್ತು ಬೇಯಿಸಿ ಊರ ಜನರಿಗೆ ಬಡಿಸಲು ಅಣಿಮಾಡಲಾಯ್ತು.

ಕಾಫಿತೋಟದ ಮಧ್ಯದ ರಸ್ತೆಯ ಎರಡೂ ಬದಿಯಲ್ಲಿ ಎದುರು ಬದುರು ಸಾಲಿನಲ್ಲಿ ಕುಳಿತ ಊರಜನರಿಗೆ ಚೌಡಿಹಬ್ಬದ ಭೋಜನವನ್ನು ಹಂದಿ ಉಪ್ಸಾರು, ಕೋಳಿ ಉಪ್ಸಾರು, ಮಸಾಲೆ ಮಿಶ್ರಣದ ಹಂದಿ ಹುರಿತೊಂಡಿನೊಂದಿಗೆ ಬಡಿಸುತ್ತಿದ್ದರು. ನೂರಾರು ಜನ ಸೇರಿದ್ದರಿಂದ ಎಲ್ಲರಿಗೂ ಒಂದೇಸಲ ಊಟಕ್ಕೆ ಕೂರಲು ಸ್ಥಳಾವಕಾಶ ಇಲ್ಲದ್ದರಿಂದ ಮೂವತ್ತೂಮ್ವತ್ತು ಜನರ ಎರಡು ಹಂತಿ ಊಟ ಮಾತ್ರ ಆಗಿತ್ತು.

ಅಷ್ಟರಲ್ಲಿ ಕಾಫಿರೂಟಿನ ಬದಿಯಲ್ಲಿ ಇಸ್ಪೀಟಾಡುತ್ತಿದ್ದವರ ಗುಂಪಿನಿಂದ ಯಾರೋ ಎರಡಡಿ ಉದ್ದದ ಕೋಲು ಸೌದೆ ತುಂಡನ್ನು ಊಟಮಾಡಿ ಕೈತೊಳೆಯುತ್ತಿದ್ದವರ ಗುಂಪಿನತ್ತ ಇಸ್ಪೀಟಿನಲ್ಲಿ ದುಡ್ಡು ಕಳೆದುಕೊಂಡ ಹತಾಶೆಗೋ, ಊಟ ತಡವಾಗುತ್ತಿದೆ ಎಂಬ ಸಿಟ್ಟಿಗೋ, ಜಗಳ ಹತ್ತಿಸಿ ತಮಾಷೆ ನೋಡುವ ತೆವಲಿಗೋ ಎಸೆದ. ಎಸೆದ ಆ ಕೋಲು ಗುರಿತಪ್ಪಿ ದಿಕ್ಕಾಪಾಲಾಗಿ ಬೇಲಿ ಪಕ್ಕದ ಪನ್ನೇರಲೆ ಮರದಲ್ಲಿದ್ದ ಬ್ಯಾಣದ ಕೊಟ್ಟೆಗೆ ಬಡಿದು, ಅರ್ಧ ಕೊಟ್ಟೆಯನ್ನೇ ಹರಿದು ಹಾಕಿದಲ್ಲದೇ ರಸ್ತೆ ಪಕ್ಕ ಮಾತನಾಡ್ತಾ ನಿಂತಿದ್ದವರ ಮುಸುಡಿಗೇ ಹೋಗಿ ಬಡಿಯಿತು.

ಯಾವನ್ರಲ ಅವ್ನು, .....ಟಿಟಿ ಕೋಲಿನ ಪೆಟ್ಟು ತಿಂದು ಒಡೆದ ತುಟಿಯನ್ನು ಕೈಯಲ್ಲಿ ಒತ್ತಿಕೊಂಡು ತಿರುಗಿ ನೋಡಿದ ಶ್ರೀನಿವಾಸನಿಗೆ ಝುಮ್ ಝುಮ್ ಎಂದು ಎರಡು ಬ್ಯಾಣಗಳು ಕಣ್ಣಿನ ಹುಬ್ಬಿನ ಮೇಲೊಂದು ಕುತ್ತಿಗೆಗೆ ಬಳಿಗೊಂದು ಬಾರಿಸಿಯೇಬಿಟ್ಟವು. ಕಾಫಿತೋಟದೊಳಗಿನ ತೊಟ್ಟಿಲು ಗುಂಡಿಯಲ್ಲಿ ಅಡಗಿಸಿಟ್ಟು, ಹಂಚಿಕೊಂಡು ಭಟ್ಟಿಸರಾಯಿ ಸೇವಿಸುತಿದ್ದ ಹತ್ತಾರು ಮಂದಿಯ ಮುಖಾಮೂತಿ ಎನ್ನದೇ ಬ್ಯಾಣಗಳು ದಾಳಿಮಾಡಿದವು. ಇಸ್ಪೀಟಾಡುತಿದ್ದ ರಾಜ, ಗುಲಾಮ, ಕಳವಾರ, ಜೋಕರ್‌ಗಳು ತಿಕದ ಸುತ್ತ ಸುತ್ತಿಕೊಂಡಿದ್ದ ಲುಂಗಿಯನ್ನು ಬಿಚ್ಚಿಕೊಂಡು ತಲೆಗೆ ಮುಸುಗು ಹಾಕಿಕೊಂಡು ಈ ತೊಂಡೂ ಬೇಡ ಚೌಡೀನೂ ಬೇಡ ಎಂದು ರಾಮ್ನಳ್ಳಿ ಗದ್ದೆ ಹಾರಿ ದಿಕ್ಕಾಪಾಲಾದರು. ಅಷ್ಟರಲ್ಲಿ ಮಂಜಯ್ಯ ಅಂಡ್ ಗ್ಯಾಂಗ್ ಚೌಡೀಹಬ್ಬದ ಕೊನೆಯ ಹಂತಿಯ ಊಟಕ್ಕಾಗಿ ಸೋಡಾ ಬೆನ್ನಣ್ಣನ ಆಟೋದಿಂದ ಕೆಳಗಿಳಿದವರೇ ಬ್ಯಾಣದ ದಾಳಿಗೆ ತಲೆಕೆಟ್ಟವರಂತಾಗಿ ಹಿಂದಿರುಗಿ ಓಡಿದವರೇ ತಾವು ಬಂದಿದ್ದ ಆಟೋ ಹತ್ತಲುಪಕ್ರಮಿಸಿದರು. ಆ ಗದ್ದಲಮಯ ಗೊಂದಲವನ್ನು ಕಂಡು ಸೋಡಾ ಬೆನ್ನಣ್ಣ ಸತ್ತೆನೋ ಕೆಟ್ಟೆನೋ ಎಂದುಕೊಂಡು ಅಷ್ಟರಲ್ಲಾಗಲೇ ಆಟೋದೊಂದಿಗೆ ಪಂಪ್‌ಹೌಸ್ ಅಪ್ಪನ್ನು ದಾಟಿಯಾಗಿತ್ತು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248